ಚಂದ್ರಕಾಂತ ಕರದಳ್ಳಿ ತಮ್ಮ ಕಥೆ–ಕವಿತೆಗಳ ಮೂಲಕ ಕನ್ನಡದ ಮಕ್ಕಳ ಮನಸ್ಸನ್ನು ಶ್ರೀಮಂತಗೊಳಿಸಿದ ಬರಹಗಾರ. ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಸಿಹಿದಂಟುಗಳ ಕೊಯಿಲು ಬಾಕಿಯಿದ್ದಾಗಲೇ, ಈ ಕಿಂದರಜೋಗಿ ಕಾಲನ ಕರೆಗೆ ಓಗೊಟ್ಟಿದ್ದಾರೆ.

■ ಮಹತಿ
ಚಿತ್ರ: ದೇವು ಪತ್ತಾರ



# ಕಿಂದರಜೋಗಿ ಕರದಳ್ಳಿ

**ಹಲವು ಮರದ ಹಣ್ಣು ತಿನ್ನುವ ಹಕ್ಕಿಯಂತಿದ್ದರೂ ಅವರ ಮುಖ್ಯ ಒಲವು ಮಕ್ಕಳ ಸಾಹಿತ್ಯದ ಬಗೆಗೇ ಇತ್ತು.**

ಮೊದಲನೋಟಕ್ಕೆ ಕೊಂಚ ಗಡುಸು ಮುಖ ಎನ್ನುವಂತೆ ಕಾಣಿಸುತ್ತಿದ್ದ ಚಂದ್ರಕಾಂತ ಕರದಳ್ಳಿ (ಆ. 25, 1952 – ಡಿ. 19, 2019) ಅವರ ಅಂತರಂಗದಲ್ಲಿದ್ದುದು ಮಗುತನ. ಸದಾ ಲವಲವಿಕೆಯಿಂದ ಇರುತ್ತಿದ್ದ, ತಮ್ಮ ಜೀವನೋತ್ಸಾಹವನ್ನು ಇತರರಿಗೂ ಹಂಚುತ್ತಿದ್ದ ಅವರು, ತಮ್ಮ ಜೀವನದುದ್ದಕ್ಕೂ ಬದುಕಿದ್ದು ಮಕ್ಕಳಿಗೆ ಕನಸುಗಳನ್ನು ತುಂಬುವ ಕೆಲಸದಲ್ಲಿ.

ಕನ್ನಡದ ಮಕ್ಕಳ ಸಾಹಿತ್ಯ ಜೀವವುಳಿಸಿಕೊಂಡಿರುವುದೇ ಶಾಲಾ ಶಿಕ್ಷಕರ ಮೂಲಕ. ನವೋದಯದ ಕಾಲಘಟ್ಟದಲ್ಲಿ ಕುವೆಂಪು, ಬೇಂದ್ರೆ, ಶಿವರಾಮ ಕಾರಂತ, ಜಿ.ಪಿ. ರಾಜರತ್ನಂ ಸೇರಿದಂತೆ ಅನೇಕ ಹಿರಿಯರು ಮಕ್ಕಳಿಗಾಗಿ ಬರೆದರು; ಮಕ್ಕಳಿಗೆ ಬರೆಯುವುದು ತಮ್ಮ ಜವಾಬ್ದಾರಿ ಎಂದವರು ಭಾವಿಸಿದ್ದರು. ಆದರೆ, ನಂತರದ ವರ್ಷಗಳಲ್ಲಿ ಶಿಶುಸಾಹಿತ್ಯ ಹಿನ್ನೆಲೆಗೆ ಸರಿಯಿತು. ಮಕ್ಕಳಿಗಾಗಿ ಬರೆಯುವುದು ತಮ್ಮ ಯೋಗ್ಯತೆಗೆ ಕುಂದು ಎಂದು ಪ್ರಸಿದ್ಧ ಕವಿಗಳು ಭಾವಿಸಿದರೇನೊ? ಯಾವ ಯಾವ ಕಾರಣದಿಂದಲೋ ಅನಾಥವಾಗಿದ್ದ ಮಕ್ಕಳ ಸಾಹಿತ್ಯವನ್ನು ಕೈಗೆತ್ತಿಕೊಂಡು ಲಾಲಿಸಿದವರು ಶಾಲಾ ಶಿಕ್ಷಕರುಗಳು. ತಮಗೆ ತೋಚಿದಂತೆ ಬರೆದುಕೊಂಡು, ಬರೆದುದನ್ನು ಮಕ್ಕಳೊಂದಿಗೆ ಹಾಡಿಕೊಂಡು ‘ಮಕ್ಕಳ ಸಾಹಿತ್ಯ’ವನ್ನು ಜೀವಂತವಾಗಿಟ್ಟ ಕೀರ್ತಿ ಶಿಕ್ಷಕರಿಗೆ ಸಲ್ಲಬೇಕು. ಅಂತಹ ಶಿಕ್ಷಕರಲ್ಲಿ ಕರದಳ್ಳಿಯವರೂ ಒಬ್ಬರು. ಅವರು ರಚಿಸಿದ ಸುಮಾರು 50 ಪುಸ್ತಕಗಳಲ್ಲಿ ಅರ್ಧ ಭಾಗ ಮಕ್ಕಳ ಸಾಹಿತ್ಯ ಕೃತಿಗಳೇ ಆಗಿರುವುದು ವಿಶೇಷ.

ಕರದಳ್ಳಿ ಅವರ ಪಾಲಿಗೆ ಮಕ್ಕಳಿಗಾಗಿ ಬರೆಯುವುದು ವ್ಯಕ್ತಿಗತ ಹಂಬಲವಷ್ಟೇ ಆಗಿರಲಿಲ್ಲ; ವೃತ್ತಿಯ ಅಗತ್ಯವೂ ಆಗಿತ್ತು. ಮಕ್ಕಳೊಂದಿಗೆ ನಿತ್ಯ ಒಡನಾಡುತ್ತಿದ್ದ ಅವರಿಗೆ ಮಕ್ಕಳ ಮನಸ್ಸನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವ ಮಹತ್ವದ ಅರಿವಿತ್ತು. ಆ ಅರಿವಿನಿಂದಲೇ ಮಕ್ಕಳಿಗಾಗಿ ಕೊನೆಯತನಕ ಬರೆದರು. ಪ್ರಾಸಕ್ಕೆ ಪ್ರಾಸ ಜೋಡಿಸಿದರು, ಹಾಡು ಬರೆದರು, ಕಥೆ ಕಟ್ಟಿದರು, ಒಗಟುಗಳನ್ನು ಸಂಗ್ರಹಿಸಿದರು, ಜೀವನಕಥೆಗಳನ್ನು ದಾಖಲಿಸಿದರು – ಮೇಷ್ಟರಾಗಿದ್ದುಕೊಂಡೇ ಒಂದು ಸಂಸ್ಥೆ ಮಾಡುವ ಕೆಲಸವನ್ನು ಮಾಡಿದರು.

‘ನಲಿದಾಡು ಬಾ ನವಿಲೆ’, ‘ಪುಟ್ಟನ ಕನಸು’, ‘ನಮ್ಮ ಹಳ್ಳಿ ನಮಗೆ ಚೆಂದ’, ‘ಚಂದಮಾಮ ಒಬ್ಬನೆ ಇದ್ದೀಯಾ?’, ‘ಉಪ್ಪಿನಗೊಂಬೆಯ ಹುಟ್ಟೂರು’, ‘ಆಕಾಶವೇಕೆ ಮೇಲಿದೆ?’, ‘ಉಪ್ಪಿನ ಗೊಂಬೆ’, ‘ಮಾಯದ ಗಂಟೆ’, ‘ಕಾಡು ಕನಸಿನ ಬೀಡಿಗೆ’ – ಇವು ಕರದಳ್ಳಿಯವರು ಕೆಲವು ಜನಪ್ರಿಯ ಕೃತಿಗಳು.

ಚಂದ್ರಕಾಂತ ಕರದಳ್ಳಿ ಯಾದಗಿರಿ ಜಿಲ್ಲೆಯ ಶಹಾಪುರದವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ